## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

### ಸಿ.ಸಿ. 13/2014

ಸಾಕ್ಷಿದಾರರ ಹೇಳಿಕೆಃ

| | | |
|---|---|---|
| ಹೆಸರು | ಸಿ ಆರ್ ಬಸವರಾಜು | ಪ್ರಾಸಾಃ**1** |
| ತಂದೆಯ ಹೆಸರು | ಸಿ ರಾಮ ರೆಡ್ಡಿ | |
| ವಯಸ್ಸು | 49 ವರ್ಷ | |
| ವೃತ್ತಿ | ಎ ಎಸ್ ಐ ನ್ಯಾಮತಿ ಠಾಣೆ | |
| ವಾಸಸ್ಥಳ | ನ್ಯಾಮತಿ | |

### ದಂಡ ಪ್ರಕ್ರಿಯಾ ಸಂಹಿತೆಯ ಕಲಂ 299 ರಡಿಯಲ್ಲಿ ಸಾಕ್ಷ್ಯ ವಿಚಾರಣೆ

ದಿನಾಂಕಃ **20.06.2020** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

### ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ

ನಾನು 2020 ರಿಂದ ನ್ಯಾಮತಿ ಠಾಣೆಯಲ್ಲಿ ಎ ಎಸ್ ಐ ಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

ನ್ಯಾಯಾಲಯವು ಆರೋಪಿಯ ವಿರುದ್ಧ ಉದ್ಘೋಷಣೆಯನ್ನು ಹೊರಡಿಸುವಂತೆ ಆದೇಶಿಸಿದ್ದು, ಆ ಮೇರೆಗೆ ಈ ಪ್ರಕರಣದಲ್ಲಿ ನ್ಯಾಯಾಲಯವು ಆರೋಪಿ ವಿರುದ್ಧ ಉದ್ಘೋಷಣೆಯನ್ನು ಹೊರಡಿಸಿದ್ದು, ಸದರಿ ಆದೇಶದ ಮೇರೆಗೆ ದಿನಾಂಕಃ 31-01-2021 ರಂದು ಬೆಳಿಗ್ಗೆ 11.00 ರಿಂದ 12.00 ಗಂಟೆಯವರೆಗೆ ಆರೋಪಿಯ ವಾಸ ಸ್ಥಳವಾದ ದಕ್ಷಿಣ ಕನ್ನಡ ಜಿಲ್ಲೆ , ಪುತ್ತೂರು ತಾಲ್ಲೂಕು , ಕಾಣೆಯೂರು, ಸ್ಥಳವನ್ನು ಪರಿಶೀಲನೆ ಮಾಡಿ ಆರೋಪಿಯ ಬಗ್ಗೆ ವಿಚಾರಿಸಲಾಗಿ ಸ್ಥಳೀಕರು ಆರೋಪಿಯ ಹೆಸರಿನ ವ್ಯಕ್ತಿಯು ಯಾರು ಸಹ ತಮ್ಮ ಗ್ರಾಮದಲ್ಲಿ ವಾಸವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ನಂತರ ಪಂಚರನ್ನು ಕರೆಯಿಸಿ ಅವರಿಗೆ ನ್ಯಾಯಾಲಯದ ಆದೇಶದ ವಿಷಯವನ್ನು ತಿಳಿಸಿ ನ್ಯಾಯಾಲಯದ ಆದೇಶದ ಪ್ರತಿಯನ್ನು ಸಾರ್ವಜನಿಕರು ಓಡಾಡುವ ಸ್ಥಳವಾದ ಕಾಣೆಯೂರು ಮಠದ ಗೋಡೆಯ

ಮೇಲೆ ಮತ್ತು ಬಸ್ ನಿಲ್ದಾಣ ಹಾಗೂ ಪಂಚಾಯಿತಿಯ ಸೂಚನಾ ಫಲಕಕ್ಕೆ ಅಂಟಿಸಿ, ಪಂಚಾಯಿತಿಯ ಸಿಬ್ಬಂದಿ ಮೂಲಕ ಟಾಂ ಟಾಂ ಹೊಡೆಯಿಸಿ, ಮಹಜರನ್ನು ಸ್ಥಳದಲ್ಲಿ ತಯಾರಿಸಿ, ಪಂಚರ ಸಹಿಯನ್ನು ಪಡೆದುಕೊಂಡಿರುತ್ತೇನೆ.

ನ್ಯಾಯಾಲಯದ ಉದ್ಘೋಷಣಾ ಆದೇಶದ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ಸಾಕ್ಷಿಯು ಉದ್ಘೋಷಣಾ ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಆರೋಪಿಯ ಚರಾ ಮತ್ತು ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ಕಾಣೆಯಾರು ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯವರು ನೀಡಿದ ಹಿಂಬರಹವನ್ನು ನಿಪಿ 3 ಎಂದು ಗುರುತಿಸಲಾಗಿದೆ. 3 ಛಾಯಚಿತ್ರಗಳನ್ನು ಮತ್ತು ಸಿಡಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ-4 ರಿಂದ 7 ಎಂದು ಗುರುತಿಸಲಾಯಿತು.

ಆರೋಪಿಯು ತಲೆಮರಿಸಿಕೊಂಡಿರುವುದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

**ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

**ಸಿ/ಸಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಹೊನ್ನಾಳಿ.**